ಬಟ್ಟೆಗಳಿವೆಯೇ ಎಂದು. ಎಲ್ಲವೂ ಯಥಾಸ್ಥಾನದಲ್ಲಿತ್ತು. ಅಲ್ಲಿಗೆ ರೂಪಳ ಮನೆಯಿಂದ ಹಿಂತಿರುಗಿ ಬಂದಿಲ್ಲ ದಾರಿಯಲ್ಲಿ ಬರುವಾಗ... ಅಪಘಾತವೇ?, ಮುಂದೆ ಯೋಚಿಸುವ ಧೈರ್ಯ ಬರಲಿಲ್ಲ. ಅಲ್ಲೇ ಮಂಚದ ಮೇಲೆ ಕುಸಿದೆ. ಪ್ರತಿನಿತ್ಯ ಹತ್ತಾರು ಅವಘಡಗಳ ಸಮಾಚಾರ ಸಿಗುತ್ತಿತ್ತು. ಅದನ್ನು ನಾವೆಷ್ಟು ನಿರ್ವಿಕಾರ ಭಾವದಿಂದ ಸ್ವೀಕರಿಸುತ್ತಿದ್ದೆವು. ಆದರೆ ಇಂದು ಅದೇ ವಿಚಾರ ನಮ್ಮ ಸ್ವಂತ ವರ್ತುಲದಲ್ಲಿರಬಹುದೆಂಬ ಶಂಕೆ ಮನಸ್ಸನ್ನು ವಿಚಲಿತಗೊಳಿಸಿತ್ತು.

ಮೈಸೂರಿನಲ್ಲಿದ್ದ ಮಾವನ ಜೊತೆ ತಕ್ಷಣ ಮಾತನಾಡುವುದು ಸೂಕ್ತವೆಂದು ಕರೆ ಮಾಡಿದೆ. 'ಹಲೋ ಪಂಕಜ್ ಇದೇನು ಇಷ್ಟು ರಾತ್ರಿಲೀ ಫೋನ್? ಎಲ್ಲಾ ಸೌಖ್ಯವೇ?'

'ಮಾವ ಕಾವ್ಯ ನಿಮ್ಮನ ಸಂಪರ್ಕ ಮಾಡಿದ್ದಾಳಾ? ನಾನು ಈಗ ಆಫೀಸ್‌ನಿಂದ ಬಂದೆ, ಅವಳು ಮನೇಲಿಲ್ಲ. ಸೆಲ್ ಆಫ್ ಬರ್ತಿದೆ.'

'ಏನು ಹೇಳ್ತಿದ್ದಿಯಪ್ಪಾ ಇಷ್ಟೊತ್ತಿನಲ್ಲಿ ಎಲ್ಲಿಗೆ ಹೋಗ್ತಾಳೆ ಒಬ್ಬಳೇ? ಇವತ್ತು ಬೆಳಗ್ಗಿನಿಂದ ನಮ್ಮ ಜೊತೆ ಮಾತಾಡಿಲ್ಲ'. ಅತ್ತೆ, ಮಾವನ ಸೆಲ್ ತೊಗೊಂಡು 'ಏನಾಯ್ತುಪ್ಪ ಎಲ್ಲಿ ಹೋದಳು ಅಕ್ಕ ಪಕ್ಕ ವಿಚಾರಿಸಿದಿರಾ?' ಅತ್ತೆಯ ಕಂಠ ಗದ್ಗದವಾಗಿ ಅಳುವನ್ನು ತಡೆಯಲು ಅಸಮರ್ಥರಾದರು. ನಾನು ಬೆಳಗಿನಿಂದ ತಿಳಿದ ಆಗುಹೋಗುಗಳನ್ನು ವಿನಿಮಯ ಮಾಡಿಕೊಂಡೆ. ಮಾವನವರು ಮಾತನಾಡಿ 'ಪಂಕಜ್ ಏನಾದರೂ ಕೋಪ ತಾಪ ಜರುಗಿತ್ತೇನು ಬೆಳಗ್ಗಿನಿಂದಾ?' 'ಖಂಡಿತ ಇಲ್ಲ, ಮಾವ ನಮ್ಮ ಅನ್ಯೋನ್ಯತೆ ನಿಮಗೊತ್ತು. ಯಾವ ರೀತಿ ಇರಿಸು ಮುರುಸಿಲ್ಲ. ನನಗೆ ಏನೂ ತೋಚುತ್ತಿಲ್ಲ, ಏನು ಮಾಡಲಿ ಈಗ ಪೊಲೀಸ್‌ಗೆ ದೂರು ಕೊಡಲೇಬೇಕಾಗುತ್ತೆ.'

'ಈಗೇನು ಮಾಡಬೇಡಪ್ಪ ನಾವು ತಕ್ಷಣ ಹೊರಡುತ್ತೇವೆ. ವಿಚಾರ ಮಾಡೋಣ'. ಅತ್ತೆ ಜೋರಾಗಿ ಅಳುತ್ತಿದ್ದುದ್ದು ಕೇಳಿಸಿತು.

* * *

ನನ್ನ ಆಪ್ತಮಿತ್ರ ಪ್ರಕಾಶನ ಸಲಹೆಯ ಮೇರೆಗೆ ತಕ್ಷಣ ದೂರು ದಾಖಲಿಸುವುದು ಅನಿವಾರ್ಯವೆಂದು ಪೋಲೀಸ್ ಠಾಣೆ ತಲುಪಿದೆ. ಪ್ರಕಾಶ್ ನನ್ನ ಅಲ್ಲೇ ಕೂಡಿಕೊಂಡ. ನಡುರಾತ್ರಿಯಲ್ಲಿ ದೂರು ದಾಖಲಿಸಲು ಠಾಣೆ ಪ್ರಭಾರಿ ಅಸಹನೀಯತೆ ತೋರಿಸುತ್ತಾ 'ವಿವರವೆಲ್ಲಾ ಬರೆಸಿ, ಅಲ್ಲಿ ರೈಟರ್ ಇದ್ದಾನಲ್ಲ ಅವನ ಬಳಿ ಕೊಡಿ' ಎಂದು ಕೈ ತೋರಿಸಿದ. ಹೆಸರು, ವಯಸ್ಸು, ವಿಳಾಸ ಮುಂತಾವುದನ್ನು ನಮೂದಿಸಿ 'ಬೆಳಗಿನಿಂದ ಮನೆಗೆ ಬಂದಿಲ್ಲ, ಈಗ ಬಂದು ನಮ್ಮ ತಲೆ ತಿನ್ನುತ್ತೀರಲ್ಲಾ. ಮುಂಚೆನೇ ಯಾಕೇ ಬರಬಾರದಿತ್ತಾ?'

'ನಾನು ಸ್ವಲ್ಪಹೊತ್ತಿನ ಮುಂಚೆ ಮನೆಗೆ ಬಂದಾಗ ಗೊತ್ತಾಯ್ತು ಸಾರ್, ಏನಾದರೂ ಅಪಘಾತ ಆಗಿದೆಯೋ ಅನ್ನೋ ಹೆದರಿಕೆ. ಜಯನಗರಕ್ಕೆ ನಾಮಕರಣಕ್ಕೆ ಹೋಗಿದ್ದರು, ಅಲ್ಲಿಂದ ವಾಪಸ್ಸಾಗಿಲ್ಲ'.

'ಸರಿ ನಾನು ವ್ಯಾಪ್ತಿಲಿರೋ ಠಾಣೆಗಳಿಗೆ ಸೂಚನೆ ಕೊಡ್ತೀನಿ, ಯಾವುದಾದರೂ ರಸ್ತೆ ಅಪಘಾತದ ಕೇಸ್ ಇದೆಯಾ ಅಂಥ. ಅದು ಸರಿ ಏನಾದರೂ ಪ್ರೀತಿ ಪ್ರೇಮ ಅಂದುಕೊಂಡು ಓಡಿ ಹೋಗಿದ್ದಾರ, ಯಾರ ಜೊತೆಗಾದರು?'

ನನಗೆ ಬರುತ್ತಿದ್ದ ಕೋಪವನ್ನು ಕಂಡು ಪ್ರಕಾಶ್ ನನ್ನ ಕೈ ಅದುಮಿ 'ಹಾಗೇನಿಲ್ಲಾ ಸಾರ್, ಗಂಡ ಹೆಂಡತಿ ಚೆನ್ನಾಗಿದ್ದಾರೆ.'

'ಇವತ್ತು ಜಗಳ ಕದನವೇನಾದರು ನಡೆದಿತ್ತಾ?...'

'ಏನೂ ನಡೆದಿರಲಿಲ್ಲ'. 'ಅಪಹರಣ ದುಡ್ಡಿನ ಡಿಮ್ಯಾಂಡ್ ಇರಬಹುದೇ?' ಏನು ಉತ್ತರಿಸಬೇಕೋ ತಿಳಿಯಲಿಲ್ಲ. ಪ್ರಕಾಶನೇ ಹೇಳ್ದ 'ಯಾರ ಜೊತೆನೂ ವೈರವೇನೂ ಇಲ್ಲ'.

'ಸರಿ ನಾಳೆ ಎಫ್.ಐ.ಆರ್. ಪ್ರತಿ ಕೊಡ್ತೀನಿ. ಬೆಳಗ್ಗೆ ಹನ್ನೊಂದು ಗಂಟೆಗೆ ಬಂದು ನೋಡಿ. ಏನಾದರೂ ಸುಳಿವು ಸೂಚನೆಇದ್ದರೆ ತಿಳಿಸಿ'.

ನಾವು ಹೊರಬಂದು ರಸ್ತೆಯಲ್ಲಿ ನಿಂತಾಗ ಮುಂದೇನು ಎಂಬುವ ಪ್ರಶ್ನೆ ಭೂತಾಕಾರವಾಗಿ ಬೆಳೆದು ನನ್ನ ಯೋಚನಾ ಶಕ್ತಿಯನ್ನು ಕುಂದಿಸಿತು. ಪ್ರಕಾಶನ ಸಲಹೆ ಮೇರೆಗೆ ಅಲ್ಲಿಂದ ಜಯನಗರದವರೆಗೂ ವ್ಯಾಪ್ತಿಯಲ್ಲಿರುವ ಪೊಲೀಸ್ ಠಾಣೆಗಳನ್ನು ಭೇಟಿಕೊಟ್ಟು, ದಾಖಲಾಗಿದ್ದ ರಸ್ತೆ ಅಪಘಾತಗಳ ವಿವರಗಳನ್ನು ತಿಳಿದುಕೊಂಡೆವು. ಯಾವುದೇ ಹೆಂಗಸು ಅಪಘಾತಕ್ಕೆ ತುತ್ತಾಗಿಲ್ಲದಿದ್ದದು ಸಮಾಧಾನ ತಂದಿತ್ತು. ಆದರೆ ಇಲ್ಲಿನ ಠಾಣೆಗಳ ವ್ಯಾಪ್ತಿಯಾಚೆಯಲ್ಲಿ ಅಪಘಾತವಾಗಿದ್ದರೇ ಎನ್ನುವ ಅಳುಕಿತ್ತು.

ರಾತ್ರಿಯಿಂದ ನಾನು ಊಟ ಮಾಡಿಲ್ಲವೆಂದರಿತು ಪ್ರಕಾಶ್ ತನ್ನ ಬೈಕ್ ಬಸ್ ಸ್ಟ್ಯಾಂಡ್‌ನ ಅಂಗಡಿಯಲ್ಲಿ ನಿಲ್ಲಿಸಿ ಕಾಫಿ ಬಿಸ್ಕತ್ತು ಹೇಳಿ ತನ್ನ ಸಿಗರೇಟು ಹೊರ ತೆಗೆದು ನನಗೊಡ್ಡಿದ. ನಾನು ತಲೆಯಾಡಿಸಿದ್ದು ನೋಡಿ 'ವಾಹ್ ಪಂಕಜ್ ನಾನು ಮರೆತು ಬಿಟ್ಟೆ, ಹೆಂಡತಿಗೋಸ್ಕರ ಬಿಟ್ಟಿದ್ದಿಯಂಥಾ. ಒಳ್ಳೆ ಕೆಲ್ಸ ಮಾಡ್ದೆ ನನಗೂ ತುಂಬಾ ಒತ್ತಾಯವಿದೆ ಮನೆಯಲ್ಲಿ ಆದರೂ ಬಿಡಕ್ಕಾಗಿಲ್ಲ'.

ನಾನು ಮೌನವಾಗಿದ್ದು ನೋಡಿ 'ಏನನ್ನಿಸುತ್ತೆ ನಿನಗೆ ಪಂಕಜ್? ಎಲ್ಲಿ ಹೋದ್ರು ಕಾವ್ಯ? ಸದ್ಯ ಏನೂ ಅನಾಹುತವಾಗಿರದಿರಲಿ ಅನ್ನೋದೆ ನಮ್ಮ ಪ್ರಾರ್ಥನೆ. ಬೆಳಗ್ಗೆ ಒಂದು ಸಲ ಕಾವ್ಯಳ ಇಮೇಲ್ ತೆಗೆದು ನೋಡು, ಏನಾದರೂ ಸುಳಿವಿರಬಹುದೆಂದು. ಪ್ರಕಾಶ್ ಸೂಚಿಸುತ್ತಿರುವುದೇನೆಂದು ಗೊತ್ತಾಯ್ತು. 'ನೋಡ್ತೀನಿ ಆದರೆ ಪೇದೆ ಹೇಳಿದ್ದಾಗೆ ಅಪಹರಣವಾಗಿದ್ದರೇ? ಪ್ರತಿದಿನ ವಾಹಿನಿಗಳಲ್ಲಿ ಬರ್ತಿರತ್ತಲ್ಲಾ ಅಪಹರಣ, ಸಾಮೂಹಿಕ ಅತ್ಯಾಚಾರ ಅಂಥೆಲ್ಲಾ...' ಮುಂದೆ ಹೇಳಲಾರದೆ ಒತ್ತಿಬಂದ ದುಃಖ ನನ್ನ ಧ್ವನಿಯನ್ನ ಕರ್ಕಶಗೊಳಿಸಿತು. ನನ್ನ ಮನಸ್ಥಿತಿಯ ಅರಿವಾಗಿ ಪ್ರಕಾಶ್ ನನ್ನ ಹೆಗಲ ಮೇಲೆ ಸಮಾಧಾನಿಸುವಂತೆ ಕೈ ಹಾಕಿ ನನ್ನ ಸ್ವಾಂತನಗೊಳಿಸಲೆಂದು 'ಹಾಗೇನು ಆಗಿರಲ್ಲ ಬಿಡು. ಅಂಥದ್ದೇನಾದರೂ ಇದ್ದರೆ ಚಾನೆಲ್‌ಗಳವರು ಹಗರಣ ಮಾಡಿ ಬಿಡುತ್ತಿದ್ದರು..' 'ಸದ್ಯ ನನ್ನ ಕಾವ್ಯ ಸುರಕ್ಷಿತಳಾಗಿರಲಿ ಅನ್ನೋದೊಂದೇ ಕೋರಿಕೆ ಧರ್ಮಸ್ಥಳ ಮಂಜನಾಥನಲ್ಲಿ'.

* * *

ಬೆಳಗ್ಗೆ ಮನೆ ಚಟುವಟಿಕೆಯ ಕೇಂದ್ರಬಿಂದುವಾಗಿತ್ತು. ಮೈಸೂರಿನಿಂದ ಅತ್ತೆ ಮಾವ, ಅತ್ತೆಯ ಸಹೋದರ ಮಂತಾದವರು ಬಂದಿಳಿದಿದ್ದರು. ನನ್ನ ತಾಯಿ ಬಳ್ಳಾರಿಯಿಂದ ಹೊರಟಿದ್ದು ಸ್ವಲ್ಪಹೊತ್ತಿನಲ್ಲಿ ತಲುಪವವರಿದ್ದರು. ನನ್ನ ಸಹೋದ್ಯೋಗಿಗಳು ಬಂದು ನನಗೆ ಧೈರ್ಯ ಸ್ವಾಂತನ ನೀಡುತ್ತಿದ್ದರು. ಅತ್ತೆಯ ಅಳು ಮತ್ತು ಮಾತುಗಳು ನಿರಂತರವಾಗಿತ್ತು. ಪ್ರಕಾಶನ ಕರೆ, ತೆಗೆದುಕೊಂಡೆ 'ನಗರದ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ವಿಚಾರಿಸಿದೆ.. ಅಪಘಾತದಂತಹ ಸೂಚನೆಗಳಿಲ್ಲ. ನನ್ನ ಆಫೀಸಿನ ಸಹೋದ್ಯೋಗಿಯೊಬ್ಬ ಕಂಪ್ಯೂಟರ್‌ನಲ್ಲಿ ಎಕ್ಸ್‌ಪರ್ಟ್. ನಿಮ್ಮಿಬ್ಬರ ವಿವರಗಳನ್ನು ತಿಳಿದುಕೊಂಡು ಕಾವ್ಯಳ ಇಮೇಲ್ ಪಾಸ್‌ವರ್ಡ್ ತಿಳಿದು ಅಕೌಂಟಿನ ಪರಿಶೀಲಿಸಿದ್ದಾನೆ. ಯಾವುದೇ ಸುಳಿವಿಲ್ಲ..'

ಪೊಲೀಸ್ ಠಾಣೆಯಿಂದ ಕರೆ ಬಂತು. 'ನಗರದ ಹೊರವಲಯದಲ್ಲಿ ಶವ ಸಿಕ್ಕಿದೆ. ಸುಮಾರು ಮೂವತ್ತು ವರ್ಷ ವಯಸ್ಸಿನ ಮಹಿಳೆಯದು.. ಕೊಲೆ ಪ್ರಕರಣ, ಮುಖ ವಿಕೃತವಾಗಿ ಗುರುತಿಸಲಾಗುತ್ತಿಲ್ಲ.. ನೀವು ತಕ್ಷಣ ಬಂದು ನೋಡಿ' ನನ್ನ ಗಾಬರಿಯುಕ್ತ ಪ್ರತಿಕ್ರಿಯೆಯಿಂದ ಸುದ್ದಿ ಸೂಕ್ಷ್ಮವಾಗಿ ತಿಳಿಸಿದರೂ ಅತ್ತೆಯ ಪ್ರಲಾಪ ತಾರಕಕ್ಕೇರಿತು. ಅತ್ತೆಯ ತಮ್ಮ ರಾಕೇಶ್ ರುದ್ರಾವತಾರ ತಳೆದು 'ನಮ್ಮ ಕಾವ್ಯನ್ನ ಯಾವೋನು ಸಾಯಿಸೋಕೆ ಸಾಧ್ಯ? ನೀನೇ ಏನೋ ಮಾಡ್ಲಿದ್ದೀ. ನಮ್ಮ ಹುಡುಗಿಗೆ ಏನಾದರೂ ಆಗಿದ್ದರೆ ನಿನ್ನ ಅಲ್ಲೇ ಹೂತು ಹಾಕಿಬಿಡ್ತೀನಿ..'.

ಮಾವನವರು, ನನ್ನ ಸಹೋದ್ಯೋಗಿಗಳು ರಾಕೇಶ್‌ನನ್ನು ಶಾಂತವಾಗಿಸಲು ಪ್ರಯತ್ನಪಟ್ಟರು. ನಾವು ಪೋಲೀಸ್ ಸೂಚಿಸಿದ ಸ್ಥಳಕ್ಕೆ ಧಾವಿಸಿದೆವು. ಮನಸ್ಸು ಅಲ್ಲೋಲ್ಲಕಲ್ಲೋಲವಾಗಿತ್ತು, ಧೈರ್ಯ ಧೂಳೀಪಟವಾಗಿತ್ತು, ಏನು ಕಾದಿದೆಯೋ ಎಂಬ ಭಯದಿಂದ.ತಲೆಯನ್ನು ಜಜ್ಜಿ ಹಾಕಲ್ಪಟ್ಟ ಆ ಶವವನ್ನು ನೋಡಿದಾಗ ದುಃಖ, ಅನುಕಂಪಕ್ಕಿಂತ ನಿರಾಳತೆಯ ನಿಟ್ಟುಸಿರೊಂದು ಹೊರ ಬಿತ್ತು, ಸದ್ಯ ನನ್ನ ಕಾವ್ಯಳಲ್ಲವೆಂದು. ರಾಕೇಶ್ ನನ್ನ ದುರುಗುಟ್ಟಿಕೊಂಡು ನೋಡುತ್ತಿದ್ದುದು ಗಮನಕ್ಕೆ ಬಂತು. ಮನೆ ತಲುಪಿದಾಗ ಅಮ್ಮ ಮತ್ತು ಅತ್ತೆ ಒಬ್ಬರಿಗೊಬ್ಬರು ದುಃಖ ತೋಡಿಕೊಂಡು ಸಮಾಧಾನ ಮಾಡಿಕೊಳ್ಳುತ್ತಿದ್ದರು. ನನ್ನ ಕಂಡು ಅಮ್ಮ ಬಳಿಗೆ ಬಂದು ತಬ್ಬಿ ದುಃಖಿಸಿದಳು. ವಿಷಯವರಿತ ಸಂಬಂಧಿಕರ, ಆಪ್ತರ ಕರೆಗಳು ನಿರಂತರವಾಗಿ ಬರುತ್ತಿದ್ದವು. ಅಮೆರಿಕದಿಂದ ಅಕ್ಕ ಭಾವ ಮಾತನಾಡಿ ಧೈರ್ಯ ತುಂಬಲೆತ್ನಿಸಿದರು. ರಾಕೇಶ್‌ನ ಪ್ರತಿಕ್ರಿಯೆ ತಿಳಿದು ಅಕ್ಕ ಹೇಳಿದಳು 'ನೀನೇನು ಬೇಜಾರು ಮಾಡಿಕೊಳ್ಳಬೇಡ, ಅವನು ತುಂಬಾ ಮುಂಗೋಪಿ, ಕಾವ್ಯ ಅವನನ್ನ ನಿರಾಕರಿಸಿ ನಿನ್ನ ವರಿಸಿದ್ದೇ ಇನ್ನೂ ಕುಟುಕುತ್ತಿದೆ ಅವನಿಗೆ'.

* * *

ಮುಂದಿನ ಮೂರ್‍ನಾಲ್ಕು ದಿನಗಳು ಆಮೆಯ ಗತಿಯಲ್ಲಿ ಕಳೆದವು. ದಿನಪತ್ರಿಕೆ, ಸುದ್ದಿವಾಹಿನಿಗಳಲ್ಲಿ ಸೂಚನೆಗಳನ್ನು ನೀಡಿದೆವು. ಈ ವಿಶಾಲ ಪ್ರಪಂಚದಲ್ಲಿ ಪ್ರತಿದಿನ ಇಂಥ ನೂರಾರು ಸುದ್ದಿಗಳು, ಇದರ ಬಗ್ಗೆ ಗಮನ ನೀಡಲು ಯಾರಿಗೆ ಸಮಯವಿದೆ ಎನ್ನುವುದು ಮನದಟ್ಟಾಯಿತು. ಅತ್ತೆ ಮಾವ ಬೆಂಗಳೂರಿನಲ್ಲೇ ರಾಕೇಶ್‌ನ ಮನೆಗೆ ತೆರಳಿದ್ದರು. ಅಮ್ಮ ಮೊದಲೆರಡು ದಿನ ತನ್ನ ವಿಷಾದ ತೋಡಿಕೊಂಡಳು ಬಂದವರ ಮುಂದೆ, ಕರೆ ಮಾಡಿದವರಲ್ಲಿ, ಅಕ್ಕಪಕ್ಕದವರಲ್ಲಿ. ದಿನ ಕಳದಂತೆ ದೃಢವಾಗುತ್ತಿದ್ದದ್ದೇನೆಂದರೆ ಅಪಘಾತ, ಅಪಹರಣ,